# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು

**ಸಿ.ಸಿ ನಂ.992-2020** **ಪಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಪ್ರಭುಸ್ವಾಮಿ.ಎಸ್<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 27-02-2023. |

**ಪಾಟೀ ಸವಾಲುಃ ಶ್ರೀ ಎನ್.ಎಸ್ ವಕೀಲರಿಂದಃ**

ಆರೋಪಿ ನನ್ನ ತಂಗಿ ಮಗನಾಬೇಕು. ನಾನು ನನ್ನ ನೋಟಿಸ್‌ನಲ್ಲಾಗಲಿ ಪಿರ್ಯಾದಿನಲ್ಲಾಗಲಿ ಮತ್ತು ನನ್ನ ವಿಚಾರಣೆಯಲ್ಲಾಗಲಿ ಆರೋಪಿ ನನ್ನ ತಂಗಿ ಮಗ ಎಂದು ತಿಳಿಸಿರುವುದಿಲ್ಲ ಎಂದರೆ ಸರಿ. ಆ ರೀತಿ ಬರೆಸಲು ನನಗೆ ತೊಂದರೆ ಇರಲಿಲ್ಲ. ಆರೋಪಿ ತಾಯಿ ಹೆಸರು ಶಿವನಂಜಮ್ಮ. ಸಾಕ್ಷಿ ಮುಂದುವರೆದು ಆದರೆ ಅವರು ಬೇರೆ ಹೆಸರು ಇಟ್ಟುಕೊಂಡಿದ್ದರೆ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಹೊಳೆನರಸೀಪುರದ ಖಾದಿ ಗ್ರಾಮೋದ್ಯೋಗ ಇಲಾಖೆಯಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ಆ ಸಮಯ ನಾನು ಹಾಸನದ ಹೊಳೆನರಸೀ ಪುರದಲ್ಲಿಯೇ ವಾಸವಿದ್ದೆನು. ಈ ಹಾಲಿ ನಾನು ನಿವೃತ್ತಿ ಹೊಂದಿರುತ್ತೇನೆ. ಆರೋಪಿ ತಂದೆ-ತಾಯಿಗಳು ವಿವಾಹದ ನಂತರ ಬದನವಾಳುವಿನ ಜಮೀನಿನಲ್ಲಿಯೇ ವಾಸವಿದ್ದರು ಎಂದರೆ ಸರಿ. ಈಗಲೂ ಅವರು ಬದನವಾಳುವಿನಲ್ಲಿಯೇ ವಾಸವಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 5 ವರ್ಷಗಳ ಹಿಂದೆ ಬೇರೆ ಕಡೆ ಮನೆ ಮಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೊಳೆನರಸೀಪುರದಲ್ಲಿ ಇದ್ದ ಸಮಯ ಬದನವಾಳುವಿನ ಮನೆಗೆ ಬಂದು-ಹೋಗಿ ಮಾಡುತ್ತಿದ್ದೆನು ಎಂದರೆ ಸರಿ. ನಾನು ಈಗ ಹಾಲಿ ನಂಜನಗೂಡಿನಲ್ಲಿ ವಾಸವಿರುತ್ತೇನೆ. ಬದನವಾಳುವಿನ ಮನೆಯಲ್ಲಿ ಆರೋಪಿ ಅವರ ತಂದೆ-ತಾಯಿಗಳು ಮತ್ತು ಅವರ ಮಕ್ಕಳು, ನನ್ನ ತಾಯಿ ಮತ್ತು ನನ್ನ ಸಹೋದರಿ ವಾಸವಿದ್ದರು. ನಾನು ನಿವೃತ್ತಿ ಹೊಂದುವ ಪೂರ್ವದಲ್ಲಿ ಜಮೀನನ್ನು ಆರೋಪಿ ಕುಟುಂಬದವರೇ ನೋಡಿಕೊಳ್ಳುತ್ತಿದ್ದರು ಹಾಗೂ ಅನುಭವಿಸುತ್ತಿದ್ದರು. ಆ ಸಮಯ ನಾನು ಬಂದು ಹೋಗಿ ಮಾಡುತ್ತಿದ್ದೆನು.

2. ಆರೋಪಿ ನನ್ನಿಂದ ಸಾಲ ಪಡೆದ ಸಮಯ ನಾನು ಹೊಳೆನರಸೀಪುರದಲ್ಲಿ ವಾಸವಿದ್ದೆನು. ಆರೋಪಿಗೆ ನನ್ನ ಖಾತೆಯಿಂದ ತೆಗೆದು ಹಣ ನೀಡಿರುತ್ತೇನೆ. ನಾನು ಹೊಳೆನರಸೀಪುರದಲ್ಲಿ ಹಣವನ್ನು ಡ್ರಾ ಮಾಡಿ ಬದನವಾಳುವಿಗೆ ತಂದು ಕೊಟ್ಟಿರುತ್ತೇನೆ. ನಾನು ಹಣವನ್ನು ಡ್ರಾ ಮಾಡಿದ್ದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಹೊಳೆನರಸೀಪುರದಿಂದ ನಂಜನಗೂಡಿಗೆ ಬರಬೇಕಾದರೆ 3-4 ಗಂಟೆಗಳ ಸಮಯ ಬೇಕಾಗುತ್ತದೆ. ನಾನು ದಿ.31-01-2020 ರಂದು ಬೆಳಗ್ಗೆ 10.00 ಗಂಟೆ ಸಮಾರಿಗೆ ನಾನು ಆರೋಪಿಗೆ ತೋಟದಲ್ಲಿ ಹಣ ನೀಡಿರುತ್ತೇನೆ. ತೋಟದಲ್ಲಿ ನಾನು ಹಣ ನೀಡಿದ ಸಮಯ ಯಾರು ಕೆಲಸಗಾರರು ಇರಲಿಲ್ಲ. ಹಣ ನೀಡಿದ ಸಮಯ ಆರೋಪಿಯಿಂದ ನಾನು ಯಾವುದೇ ದಾಖಲೆಯನ್ನು ಬರೆಸಿಕೊಂಡಿರುವುದಿಲ್ಲ ಹಾಗೂ ಅವರು ಸಹ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ. ನಾನು ಆರೋಪಿಗೆ ಹಣ ನೀಡಿದ ನಂತರ ಸುಮಾರ 10.30 ಗಂಟೆಗೆ ನಾನು ತೋಟದಿಂದ ಹೊರಟಿರುತ್ತೇನೆ. ನಾನು ಹಣ ನೀಡಿದ 3 ತಿಂಗಳ ನಂತರ ಆರೋಪಿಯನ್ನು ಹಣವನ್ನು ವಾಪಸ್ಸು ಮಾಡುವಂತೆ ಕೇಳಿದ್ದು, ಆ ಸಮಯ ಅವರು ಕೊಡುವುದಾಗಿ ಹೇಳಿ ನಂತರ ಸಿಕ್ಕಿರುವುದಿಲ್ಲ ಕೊನೆಯದಾಗಿ ದಿ.04-11-2020 ರಂದು ನನಗೆ ಆರೋಪಿ ಚೆಕ್ ಅನ್ನು ನೀಡಿರುತ್ತಾರೆ. ಆರೋಪಿ ನಂಜನಗೂಡಿನ ಐ.ಸಿ.ಐ.ಸಿ.ಐ ಬ್ಯಾಂಕ್ ಬಳಿ ನನಗೆ ಚೆಕ್ ನೀಡಿರುತ್ತಾರೆ. ನಾನು ದಿ.05-11-2020 ರಂದು ಚೆಕ್ ಅನ್ನು ನಗದೀಕರಣಕ್ಕಾಗಿ ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ. ನಾನು ಮೇಲೆ ಹೇಳಿದ ವಿಷಯಗಳನ್ನು ನನ್ನ ವಕೀಲರ ಮುಖೇನ ಹೇಳಿ ಬರೆಸಿರುತ್ತೇನೆ.

( ಮುಂದುವರಿದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯವನ್ನು ಕೋರಿದ್ದು ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**